ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಬಜೆಟ್

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ     ದಿನಾಂಕ : DATE : 5/7/19

# ಇಂದು ಬಜೆಟ್ ಮಂಡನೆ

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ 2.0 ಸರಕಾರದ ಬಜೆಟ್ ಮಂಡನೆಗೆ ಕ್ಷಣಗಣನೆ ಆರಂಭವಾಗಿದ್ದು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ



ಸಂಸತ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಬಜೆಟ್ ಮಂಡಿಸಲಿದ್ದಾರೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಹಾಗೂ ವಾಣಿಜ್ಯ ಸಮರಗಳಿಗೆ ಪ್ರತಿಯಾಗಿ ಪರಿಣಾಮಕಾರಿ ಕ್ರಮಗಳ ಜತೆಜತೆಗೆ, ದೇಶದಲ್ಲಿ ಉದ್ಯೋಗ ಕುಸಿತ , ಮಂದಗತಿ ಜಿಡಿಪಿ, ಸಮಾಧಾನಕರವಾಗಿಲ್ಲದ ಉಳಿತಾಯ ಇವೇ ಮೊದಲಾದ ಸವಾಲುಗಳಿಗೂ ಅವರ 'ಬಜೆಟ್ ಮಾಯಾಪೆಟ್ಟಿಗೆ'ಯಲ್ಲಿ ಏನೆಲ್ಲ ಪರಿಹಾರಗಳಿವೆ ಎಂಬುದರ ಕಡೆಗೇ ಎಲ್ಲರ ಗಮನ ನೆಟ್ಟಿದೆ. ಮುಖ್ಯವಾಗಿ, ಜನರಲ್ಲಿನ ಖರೀದಿಯ ಸಾಮರ್ಥ್ಯಕ್ಕೆ ಬಲ ತುಂಬಲೆಂದು ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು 2.5 ಲಕ್ಷ ರು.ಗಳಿಂದ ಮತ್ತಷ್ಟು ಹೆಚ್ಚಿಸಬಹುದು, ನೇಮಕ ಹೆಚ್ಚಳಕ್ಕೆ ಉದ್ಯೋಗದಾತರಿಗೆ ತೆರಿಗೆ ಕಡಿತದ ಮೂಲಕ ಉತ್ತೇಜಿಸಿ ಉದ್ಯೋಗಸೃಷ್ಟಿಗೆ ಪೂರಕ ವಾತಾವರಣ ಸೃಷ್ಟಿಸಬಹುದು, ಮೂಲಸೌಕರ್ಯ ವಲಯಕ್ಕೆ ಹೆಚ್ಚಿನ ಒತ್ತು ನೀಡಬಹುದು, ಬಡವರು ಮತ್ತು ಮಧ್ಯಮವರ್ಗದ ಜನರನ್ನು ಗುಮ್ಮನಂತೆ ಕಾಡುತ್ತಿರುವ ವೈದ್ಯಕೀಯ ವೆಚ್ಚಗಳ ನಿರ್ವಹಣೆಗೆ ಮಾರ್ಗೋಪಾಯ ಕಲ್ಪಿಸಬಹುದು ಎಂಬ ನಿರೀಕ್ಷೆಗಳಲ್ಲಿ ಜನರಿದ್ದಾರೆ. ಅಂತಿಮವಾಗಿ ಕೈಗೂಡುವುದೇನು ಎಂಬುದು ವಿತ್ತ ಸಚಿವರ ನಿರ್ಧಾರಕ್ಕೆ ಬಿಟ್ಟದ್ದು. ಅಲ್ಲಿಯವರೆಗೆ ನಿರೀಕ್ಷೆಗಳು ನಿರಂತರ...